**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 3243/2014** **CW**-03 **PW**-02

**ಸಾಕ್ಷಿಯನ್ನು ದಿಃ 07.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಅಶೋಕ |
| ತಂದೆಯ ಹೆಸರುಃ | ಲಕ್ಷ್ಮಣಗೌಡ |
| ವಯಸ್ಸುಃ | 47 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಕೋಟಳ್ಳಿ ಗ್ರಾಮ, |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಈಗ ಸಾಕ್ಷಿಗೆ ನಿಪಿ 1 ಮಹಜರ್ ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ನಿಪಿ 1(ಬಿ) ಎಂದು ಗುರುತಿಸಲಾಯಿತು . ನಾನು ಸದರಿ ಸಹಿಯನ್ನು 2013 ನೇ ಸಾಲಿನಲ್ಲಿ ನಗರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ . ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ . ನನ್ನ ಜೊತೆ ನಿಪಿ 1 ಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ . ನಿಪಿ 1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ .

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 14.12.2013 ರಂದು ಚನ್ನರಾಯಪಟ್ಟಣದ ಮೈಸೂರು ರಸ್ತೆಯ ಬಳಿ ಇರುವ ಶ್ರೀರಾಮ ಟ್ರಾನ್ಸ್ ಪೋರ್ಟ್ ಕಂಪನಿ ಕಚೇರಿಯಲ್ಲಿ ಪೋಲೀಸರು ಮಹಜರ್

ಮಾಡಲು ಬಂದಿದ್ದು , ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ 1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನನ್ನ ಜೊತೆ ನಿಪಿ 1 ಕ್ಕೆ ಚಾಸಾ 1 ಮತ್ತು 2 ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಆಗ ಸಮಯ ಬೆಳಗ್ಗೆ 10 ರಿಂದ 10.45 ಆಗಿತ್ತು ಎಂದರೆ ಸರಿಯಲ್ಲ . ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**